

ಮರಿ ಜೋಪಾನ ಮಾಡುವ ಆನೆಯ ಹಿಂಡು

ಕಲಿಸುತ್ತವೆ, ಅವಿಭಕ್ತ ಕುಟುಂಬದಲ್ಲಿ ಎಲ್ಲಾ ಸದಸ್ಯರು ಮಕ್ಕಳಿಗೆ ಬುದ್ಧಿ ಕಲಿಸುವಂತೆ! ಹಿಂಡನ್ನು ಮುನ್ನಡೆಸುವುದು ನಾವು ತಿಳಿದಂತೆ ಗಂಡು ಆನೆಯಲ್ಲ! ಬದಲಾಗಿ ಹಿರಿಯ ಹೆಣ್ಣು ಆನೆ.

ಯಾವುದಾದರೂ ಅಪಾಯದ ಸುಳಿವು ಸಿಕ್ಕ ತಕ್ಷಣ, ವಾಹನವೊಂದು ತಕ್ಷಣ ಬ್ರೇಕ್ ಹಾಕಿದಾಗ ಬರುವ ಶಬ್ದದಂತೆ ಕಾಂಯ್ಕ್ ಎಂದು ಒಂದೆರಡು ಬಾರಿ ಎಚ್ಚರಿಕೆ ಕೊಡುತ್ತದೆ. ಆಗ ಉಳಿದ ಆನೆಗಳು ತಮ್ಮ ಸೊಂಡಿಲನ್ನು ಅರ್ಧಕ್ಕೆ ಎತ್ತಿ ಸುತ್ತಲೂ ವಾಸನೆ ಗ್ರಹಿಸುತ್ತಾ ಗಮನಿಸತೊಡಗುತ್ತವೆ. ಯಾವ ದಿಕ್ಕಿನಿಂದ ಅಪಾಯದ ವಾಸನೆ ಸಿಗುತ್ತದೋ ತಕ್ಷಣ ಅದೇ ದಿಕ್ಕಿಗೆ ಮುಖ ಮಾಡಿ ನಿಂತು ಅಪಾಯ ಎಷ್ಟು ದೂರದಲ್ಲಿದೆ, ಯಾವ ರೀತಿಯ ಅಪಾಯ ಎಂದು ತಮ್ಮಲ್ಲೇ ಮಾತಾಡಿಕೊಂಡು ಅದಕ್ಕೆ ತಕ್ಕನಾದ ರೀತಿಯಲ್ಲಿ ಎದುರಿಸಲು ಸಜ್ಜಾಗುತ್ತವೆ.

ಹಿಂಡಿನಲ್ಲಿ 2ರಿಂದ 10ರವರೆಗೂ ಆನೆಗಳಿರುವುದುಂಟು. ಹುಲಿಯ ದರ್ಶನವಾದರಂತೂ ಹಿರಿಯ ಆನೆ ಘೀಳಿಡುತ್ತಾ ಹುಲಿಯನ್ನು ಅಟ್ಟಿಸಿಕೊಂಡು ಹೋದರೆ, ಉಳಿದ ಆನೆಗಳು ತಮ್ಮ ಮುಖವನ್ನು ಹೊರಹಾಕಿ ಮರಿಯೇ ಕಾಣದಂತೆ ಸುತ್ತುವರಿಯುತ್ತವೆ.

ಬಂಡೀಪುರ ಅರಣ್ಯದಲ್ಲೊಮ್ಮೆ 'ಟೀಚರ್ಸ್ ಫಾರ್ ಟೈಗರ್ಸ್' ತರಬೇತಿಗೆಂದು ಹೋಗಿ, ಇಲಾಖೆಯ ವಾಹನದಲ್ಲಿ ಸಫಾರಿಗೆ ತೆರಳಿದ್ದಾಗ ದಾರಿಯಿಂದ 20–25 ಅಡಿಗಳಷ್ಟು ದೂರದಲ್ಲಿ ಮತ್ತು ಪೊದೆಗಳ ನಡುವೆ ಆಹಾರ ಮೇಯುತ್ತಿದ್ದ ಆನೆಗಳ ಹಿಂಡಿನ ದರ್ಶನವಾಯಿತು. ಒಂದು ಆನೆ ಘೀಳಿಡುತ್ತಾ ತೆರೆದ ಜಾಗದಿಂದ ಪೊದೆಯೊಳಗೆ ರಭಸದಿಂದ ನುಗ್ಗಿಹೋಯಿತು. ಚಾಲಕ ವಾಹನವನ್ನು 30 ಅಡಿಯಷ್ಟು ಮುಂದಕ್ಕೆ ಚಲಿಸಿ ನಿಲ್ಲಿಸಿದ. ನಾವೆಲ್ಲರೂ ಕುತೂಹಲದಿಂದ ನೋಡುತ್ತಿದ್ದೆವು. ಆ ಆನೆ ಹೋದಷ್ಟೇ ರಭಸದಿಂದ ಲಟಪಟ ಎಂದು ಪೊದೆಗಳ ನಡುವೆ ನುಗ್ಗಿ ಕಿರುಚುತ್ತಾ ವಾಹನಕ್ಕೆ ಲಂಬವಾಗಿ ವೇಗವಾಗಿ ಬರತೊಡಗಿತು. ಚಾಲಕನಿಗೆ ಆನೆಯ ನಡವಳಿಕೆ ಗೊತ್ತಿತ್ತು ಅನ್ನಿಸುತ್ತೆ, 'ನೀವೆಲ್ಲರೂ ಏನೂ ಶಬ್ದ ಮಾಡದೆ ಸುಮ್ಮನೆ ಕುಳಿತುಕೊಳ್ಳಿ' ಎಂದು ಸೂಚಿಸಿದ.

ನಮಗೆಲ್ಲ ಎದೆಬಡಿತ ಹೆಚ್ಚಾಗಿ, ಎಲ್ಲಿ ಬಂದು ವಾಹನವನ್ನು ಗುದ್ದಿ ನಜ್ಜುಗುಜ್ಜು ಮಾಡುತ್ತದೆಯೋ, ನಮ್ಮನ್ನು ತುಳಿದು ಹಾಕುತ್ತದೆಯೋ ಎಂದು ಹೆದರಿದ್ದೆವು.



ಆನೆಗಳ ಪ್ರಮುಖ ಆಹಾರ ಬಿದಿರು. 2006ರಲ್ಲಿ ಹೂ ಬಿಟ್ಟು ಒಣಗಿ 18 ವರ್ಷಕ್ಕೆ ಇಷ್ಟು ಮಾತ್ರ ಬೆಳೆದಿದೆ

ರಭಸದಿಂದ ನುಗ್ಗಿ ಬಂದ ಆನೆ ವಾಹನದಿಂದ ಐದು ಅಡಿಯಷ್ಟೇ ದೂರದಲ್ಲಿ ಗಕ್ಕನೆ ನಿಂತು ನಮ್ಮನ್ನೇ ದಿಟ್ಟಿಸತೊಡಗಿತ್ತು. ಸ್ವಲ್ಪ ಸಮಯದ ನಂತರ ಅಲ್ಲೆ ಮೇವನ್ನು ತಿನ್ನುತ್ತಾ ನಡೆದು ಹೋಯಿತು. ಕಾಲು ಗಂಟೆ ಸರಿಯಿತು, ಚಾಲಕ ವಾಹನವನ್ನು ಮುಂದಕ್ಕೆ ಚಲಾಯಿಸಲು ಹೊರಟ. ತಕ್ಷಣ ಮತ್ತೆ ಹಿಂದಕ್ಕೆ ಬಂದು ವಾಹನದ ಜೊತೆಯಲ್ಲೇ ಅಟ್ಟಿಸಿಕೊಂಡು ಒಂದಷ್ಟು ದೂರ ಬಂತು.

ಕಳೆದ ವರ್ಷ 'ವನ್ಯಜೀವಿಗಳ ಸಪ್ತಾಹ'ದ ಅಂಗವಾಗಿ ನಮ್ಮ ಶಾಲೆಯ 20 ವಿದ್ಯಾರ್ಥಿಗಳನ್ನು ಆಹ್ವಾನಿಸಿದ್ದರು. ಸಂಜೆ 4.30ಕ್ಕೆ ಸಫಾರಿ ಹೋಗುವ ಸೌಭಾಗ್ಯ ನಮ್ಮದು. ನಾವೆಲ್ಲರೂ ವಾಹನ ಏರಿ ಕಾಡನ್ನು ನೋಡುತ್ತಾ, ವನ್ಯಜೀವಿಗಳನ್ನು ಕಣ್ತುಂಬಿಕೊಳ್ಳುತ್ತಾ ಹೊರಟೆವು. ಹುಲಿಯ ದರ್ಶನವೂ ಆಯಿತು. ಸೂರ್ಯ ಅಸ್ತಮಿಸಿ ಸ್ವಲ್ಪ ಸಮಯವಷ್ಟೇ ಆಗಿತ್ತು.

ಯಥಾಪ್ರಕಾರ ಒಂದು ಆನೆ ಹಿಂಡು ಸ್ವಲ್ಪ ದೂರದಲ್ಲೇ ಎದುರಾಯಿತು. ಅದರಲ್ಲಿ ಎರಡು ಮರಿಗಳೂ ಇದ್ದವು. ವಿದ್ಯಾರ್ಥಿಗಳೊಂದಿಗೆ ಅವುಗಳನ್ನು ನೋಡುತ್ತಿರಬೇಕಾದರೆ ಇಲ್ಲಿ ಚಾಲಕನೇ ಆನೆಗಳಿಗೆ ಸಿಟ್ಟು ಬರುವಂತೆ ಮಾಡಿದ. ವಾಹನದ ಎಕ್ಸಿಲರೇಟರನ್ನು ಪದೇ ಪದೇ ಒತ್ತಿ ಜೋರು ಶಬ್ದ ಮಾಡುತ್ತಿದ್ದ. ಒಂದು ಆನೆಗೆ ಕಿರಿಕಿರಿ ಆಗಿ ವಾಹನದ ಕಡೆಗೆ ನುಗ್ಗಿ ಬರತೊಡಗಿತು. ಆಗ ಚಾಲಕ ವಾಹನವನ್ನು ಮುಂದಕ್ಕೆ ಓಡಿಸಿಕೊಂಡು ಒಂದಷ್ಟು ದೂರ ಹೋದ. ಪುನಃ ಎಕ್ಸಿಲರೇಟರ್ ಒತ್ತಿದ್ದ. ಮತ್ತೆ ಒಂದು ಆನೆ ವಾಹನವನ್ನು ಅಟ್ಟಿಸಿಕೊಂಡು ಒಂದಷ್ಟು ದೂರ ಬರುತ್ತಿತ್ತು. ಡ್ರೈವರ್ ಉದ್ದೇಶ ಮಕ್ಕಳಿಗೆ ಖುಷಿ ಸಿಗಲೆನ್ನುವುದು. ಆದರೆ, ಇಂತಹ ಅತಿರೇಕಗಳಿಂದ ಆನೆಗಳ ವರ್ತನೆ ಬದಲಾಗುವ ಅಪಾಯವೂ ಇರುತ್ತದೆ. ಯಾವುದೇ ವಾಹನ ಬಂದರೂ ಅಟ್ಟಿಸಿಕೊಂಡು ಹೋಗುವ ಪ್ರವೃತ್ತಿ ಆನೆಗಳಲ್ಲಿ ಬೆಳೆದರೆ ಅದಕ್ಕೆ ಹೊಣೆ ಯಾರು?